ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **55/2017**

| | | |
|---|---|---|
| ಹೆಸರು | ಜಯಕುಮಾರ್ | ಸಿ.ಡಬ್ಲ್ಯೂ 5 |
| ತಂದೆಯ ಹೆಸರು | ಲೇಟ್ ಜಯರಾಜ್ | ಪಿ.ಡಬ್ಲ್ಯೂ3 |
| ವಯಸ್ಸು | 59 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಬ್ಯಾಡರಹಳ್ಳಿ | |

ಸಾಕ್ಷಿಗೆ ದಿನಾಂಕಃ 11.02.02026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ಚಾಸಾ 3 ಮತ್ತು 6 ರವರ ಪರಿಚಯವಿದೆ. ಸುಮಾರು 11 ವರ್ಷಗಳ ಹಿಂದೆ ಚಾಸಾ 1 ರವರ ಮನೆಯ ಮುಂದೆ ಪೊಲೀಸರು ಆರೋಪಿ ಮತ್ತು ಚಾಸಾ 1 ರವರ ನಡುವೆ ಆಗಿದ್ದ ಗಲಾಟೆಯ ಸಂಬಂಧವಾಗಿ ಮಹಜರ್ ಮಾಡಿರುತ್ತಾರೆ. ಸಾಕ್ಷಿಯು ಸದರಿ ದಾಖಲೆ ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 3 ಮತ್ತು 3 ಎ ಎಂದು ಗುರುತಿಸಲಾಯಿತು. ನಿಪಿ 3 ಕ್ಕೆ ನನ್ನ ಜೊತೆ ಚಾಸಾ 3 ಮತ್ತು 6 ರವರು ಸಹಿ ಮಾಡಿರುತ್ತಾರೆ. ಪೊಲೀಸರು ಮಹಜರ್ ಮಾಡಿ, ಗಲಾಟೆಗೆ ಉಪಯೋಗಿಸಿದ್ದ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ನ್ನು ನೋಡಿ, ಅದು ಕೃತ್ಯಕ್ಕೆ ಬಳಸಿದ ಕಲ್ಲು ಎಂದು ಗುರುತಿಸಿರುತ್ತಾರೆ.

ಪಾಟೀ ಸವಾಲು ಃಆರೋಪಿ ಪರ: ಶ್ರೀ ಎ.ಎಂ.ಎಂ. ವಕೀಲರಿಂದ

ಮಹಜರ್ ಮಾಡಿದ ಸ್ಥಳದ ಚೆಕ್ ಬಂದಿ ಪೂರ್ವಕ್ಕೆ ಜಯರಾಮುರವರ ಮನೆ, ಪಶ್ಚಿಮಕ್ಕೆ ಬೇರೆಯವರ ನಿವೇಶನ ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ನಾನು ನಿಪಿ 3 ಕ್ಕೆ ಸ್ಥಳದಲ್ಲಿ ಸಹಿ ಮಾಡಿಲ್ಲ, ನಾನು ಪೊಲೀಸರ ಕೋರಿಕೆ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ರ ರೀತಿಯ ಕಲ್ಲು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಮುದ್ದೆ ಮಾಲು 1 ಕ್ಕೆ ವಿಶೇಷ ಗುರುತು ಇಟ್ಟುಕೊಂಡಿರುವುದಿಲ್ಲ, ಆದರೆ ಅದೇ ಕಲ್ಲು ಆಗಿರುತ್ತದೆ. ಚಾಸಾ 1 ಮತ್ತು 2 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.